ಮಂತ್ರಿಯವರಿಂದ ಹೇಳಿಕೆ

ಕರ್ನಾಟಕ ಲೋಕಸೇವಾ ಆಯೋಗದ ಸಹಾಯಕ ಕಾರ್ಯದರ್ಶಿಯವರು ಎರಡು ಸಲ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣಗೊಳಿಸಿರುವುದು

ಶ್ರೀ ಜಿ. ಬಸವಣ್ಣಪ್ಪ (ಮಾನ್ಯ ಆಹಾರ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ (೧೧-೨-೬೭) ಮಾನ್ಯ ಸದಸ್ಯರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ತಿಳಿಳಿನೇ ನಿಯಮದನ್ವಯ ಪ್ರಸ್ತಾಪ ಮಾಡಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಈ ಹೇಳಿಕೆಯನ್ನು ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ ನೀಡಬಯಸುತ್ತೇನೆ.

''ಕರ್ನಾಟಕ ಸಚಿವಾಲಯ ಸೇವಾ ಸರ್ಕಾರೀ ಅಧೀನ ಕಾರ್ಯದರ್ಶಿ ಶ್ರೀ ಎಸ್.ಎಲ್. ಕುಲಕರ್ಣಿ ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರಿ ಅಧೀನ ಕಾರ್ಯದರ್ಶಿ ಆಗಿದ್ದಾಗ ನಿಯೋಜನೆ ಮೇಲೆ ಅವರನ್ನು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಸಹಾಯಕ ಕಾರ್ಯದರ್ಶಿಯಾಗಿ ನೇಮಿಸಲಾಗಿತ್ತು. ಮೇಲ್ಕಂಡ ಅಧಿಕಾರಿಯು ೧೯೬೩-೬೪ನೇ ಸಾಲಿನಲ್ಲಿ ತಾ: ೩-೬-೬೩ ರಿಂದ ೩೦ ದಿನಗಳ ಅವರ ಹಕ್ಕಿನಲ್ಲಿದ್ದ ಗಳಿಕೆ ರಜೆಯನ್ನು ಅಧ್ಯರ್ಪಿಸಿ ಅದನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ''೩'' ಅನುಸೂಚಿಯ ಪ್ರಕಾರ ನಗದೀಕರಣಗೊಳಿಸಿ ಕೊಂಡಿದ್ದರು. ಆ ನಗದೀಕರಣ ೧೯೬೩-೬೪ನೇ ಬ್ಲಾಕಿನ ವ್ಯಾಪ್ತಿಯಲ್ಲಿತ್ತು. ಮೇಲ್ಕಂಡ ಅಧಿಕಾರಿಯು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಸಹಾಯಕ ಕಾರ್ಯದರ್ಶಿಯಾಗಿ ತಾ:೩-೨-೬೪. ರಿಂದ ನಿಯೋಜನೆ ಮೇಲೆ ಇದ್ದಾಗ ಬ್ಲಾಕ್ ಅವಧಿಯನ್ನು ಅವರು ತಪ್ಪಾಗಿ ಅರ್ಥ ಮಾಡಿಕೊಂಡು ಆಯೋಗದಲ್ಲಿ ಪುನಃ ಅವರ ಹಕ್ಕಿನಲ್ಲಿದ್ದ ೩೦ ದಿನಗಳ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣಗೊಳಿಸಲು ಕೋರಿದ್ದರು. ಆಯೋಗದವರು ಆ ಅಧಿಕಾರಿಯು ಆ ಬ್ಲಾಕ್ ಅವಧಿಯಲ್ಲಿ ಗಳಿಕೆ ರಜೆಯ ನಗದೀಕರಣ ಪಡೆದಿದ್ದರೆ ಎಂಬ ಬಗ್ಗೆ ಮಾಹಿತಿಯನ್ನು ಸರ್ಕಾರದಿಂದ ತರಿಸಿಕೊಳ್ಳದೆ ಹಾಗೂ ಅವರಿಗೆ ನಗದೀಕರಣದ ಸೌಲಭ್ಯ ಸಲ್ಲುವ ನಿಬಂಧನೆಗೆ ಒಳಪಟ್ಟು ಅವರಿಗೆ ಆ ರಜೆಯನ್ನು ಮಂಜೂರು ಮಾಡಿ ರೂ.೨,೫೧೨.೫೦ ಗಳನ್ನು ಪಾವತಿ ಮಾಡಿದ್ದಾರೆ. ಈ ನ್ಯೂನತೆ ಪತ್ತೆಯಾದ ಕೂಡಲೇ ಸದರಿ ಅಧಿಕಾರಿಯು ಅವರು ಪಡೆದಿದ್ದ ನಗದೀಕರಣ ರಜೆಯ ಹೊತ್ತವನ್ನು ತಕ್ಷಣ ತಾ: ೧೯-೮-೬೪ ರಂದು ಖಜಾನೆಗೆ ಮರುಪಾವತಿ ಮಾಡಿದ್ದಾರೆ. ಈ ಪ್ರಕರಣದಲ್ಲಿ ಯಾವುದೇ ದುರುದ್ದೇಶ ಇರಲಿಲ್ಲ. ಆಯೋಗದವರು ಆ ಅಧಿಕಾರಿಗೆ ಲಭ್ಯವಾಗಬೇಕಾಗಿದ್ದ ಗಳಿಕೆ ರಜೆ ನಗದೀಕರಣ ಮಾಹಿತಿಯನ್ನು ಸರ್ಕಾರದಿಂದ ಪಡೆಯದೆ ಹಾಗೂ ಆ ಬ್ಲಾಕ್ ಅವಧಿಯನ್ನು ಸರಿಯಾಗಿ ವಿಶ್ಲೇಷಿಸದೆ ಸದರಿ ಅಧಿಕಾರಿಯು ದುರುದ್ದೇಶವಿಲ್ಲದೆ ಮತ್ತು ಮೇಲ್ಕಂಡ ಹೊತ್ತವು ದುರುಪಯೋಗವಾಗದಂತೆ ಪುನಃ ಮರುಪಾವತಿ ಮಾಡಿರುವುದರಿಂದ ಆ ವಿಷಯವನ್ನು ತೀವ್ರವಾಗಿ ಪರಿಗಣಿಸಬೇಕಾಗುವುದಿಲ್ಲ.

ಈ ಪ್ರಕರಣದಲ್ಲಿ ಯಾವುದೇ ಅಧಿಕಾರಿಗಳೂ ಶಾಮೀಲಾಗಿಲ್ಲ. ಇದು ಭ್ರಷ್ಟಾಚಾರದ ಪ್ರಕರಣ ಅಲ್ಲ. ಮೇಲ್ಕಂಡ ಪ್ರಕರಣದಲ್ಲಿ ಆ ಅಧಿಕಾರಿಯು ಯಾವುದೇ ದುರ್ನಡತೆಯನ್ನೂ ಮೇಲ್ನೋಟಕ್ಕೆ ಎಸಗಿಲ್ಲದ ಕಾರಣ ಅವರನ್ನು ಅಮಾನತ್ತಿನಲ್ಲಿಡುವ ಅವಶ್ಯಕತೆ ಇರುವುದಿಲ್ಲ.

(೨) ಜಿಲ್ಲಾಪರಿಷತ್ ಸದಸ್ಯರಿಗೆ ವಿಧಾನಸೌಧದೊಳಗೆ ಬರಲು ಗುರುತಿನ ಚೀಟಿ ನೀಡುವಬಗ್ಗೆ

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೆ, ಈಗ ಸ್ವಲ್ಪ ಹೊತ್ತಿಗೆ ಮುಂಚಿತವಾಗಿ ಮಾನ್ಯ ಸದಸ್ಯರಾದ ಬಿ.ಎ. ಉಮರಬ್ಬನವರು ನಿಯಮ ೩೩ಳಿಳಿಲ್ಲಿ ಸರ್ಕಾರದ ಗಮನ ಸೆಳೆದಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.